**ಅಧ್ಯಕ್ಷರು** – ಇಲ್ಲಿಗೆ ಆ ವಿಚಾರವನ್ನು ಮುಕ್ತಾಯ ಮಾಡಿದ್ದೇನೆ ಯಾವುದಾದರೂ ಸೂಚನೆ ಕಳುಹಿಸಿ ನಾನು ಅದಕ್ಕೆ ಒಂದು date ಕೊಡುತ್ತೇನೆ ಬಜೆಟ್ ಮೇಲೆ ಚರ್ಚೆ ಆರಂಭವಾಗಬೇಕಾಗಿತ್ತು, ಅದನ್ನು ಈಗ ಆರಂಭಿಸೋಣ ಈಗ ವಿರೋಧ ಪಕ್ಷದ ನಾಯಕರು ಪ್ರಾರಂಭಿಸಬೇಕು

**(ಇ) ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಆವರಣದಲ್ಲಿ ಉಪಕುಲಪತಿಗಳ ವಿರುದ್ಧ ನಡೆದಂತಹ ಪ್ರತಿಭಟನೆ ಬಗ್ಗೆ –**

**ಶ್ರೀ ಹೆಚ್ ಎಂ ವಿಶ್ವನಾಥ್** – ಅಧ್ಯಕ್ಷರೆ, ನಾನು ಒಂದು ಪತ್ರ ಕೊಟ್ಟಿದ್ದೆ ಒಂದೇ ನಿಮಿಷದಲ್ಲಿ ನಾನು ಮಾತನಾಡುತ್ತೇನೆ

**ಅಧ್ಯಕ್ಷರು** – ನಾಳೆ ಅವಕಾಶ ಕೊಡೋಣ ಈಗಾಗಲೇ ತೀರ್ಮಾನವಾಗಿದೆ ಈಗ ಆರಂಭ ಮಾಡಬೇಕು ನಾನು ತಮಗೆ ನಾಳೆ ಅವಕಾಶ ಮಾಡಿಕೊಡುತ್ತೇನೆ

**ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ)** – ಮಾನ್ಯ ಅಧ್ಯಕ್ಷರೆ, ನಿನ್ನೆ ಬೆಂಗಳೂರಿನಲ್ಲಿರುವ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ವಿಶ್ವವಿದ್ಯಾನಿಲಯದ ಒಬ್ಬ ಉಪಕುಲಪತಿಗಳ ವಿರುದ್ಧ ಪ್ರತಿಭಟನೆ ಮಾಡುವಂತಹ ಸಂದರ್ಭದಲ್ಲಿ, ಅದು ಹಿಂಸಾಚಾರಕ್ಕೆ ತಿರುಗಿ, ಲಾಠಿ ಚಾರ್ಜ್ ಆಗಿ ವಿದ್ಯಾರ್ಥಿಗಳ ಮೇಲೆ, ಬಹಳ ದೊಡ್ಡ ಹಲ್ಲೆಯಾಗಿ, 8–9 ವಿದ್ಯಾರ್ಥಿಗಳ ಬಂಧನವಾಗಿದ್ದು, ಅವರು ಜೈಲಿನಲ್ಲಿದ್ದಾರೆ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ಶಿಕ್ಷಣ ಕ್ಷೇತ್ರ ಬಹಳ ಮಹತ್ವವಾದುದು ನಮ್ಮ ಸರ್ಕಾರದ ವತಿಯಿಂದ ಇರಬಹುದು, ಸಮಾಜದಲ್ಲಿಯೂ ಇರಬಹುದು ಶಿಕ್ಷಣ ಕ್ಷೇತ್ರದಲ್ಲಿ ಈ ರೀತಿಯ ಘಟನೆಗಳು ನಡೆಯುವಂಥಾದ್ದು ಯಾವುದೇ ಸರ್ಕಾರಕ್ಕೆ ಆಗಬಹುದು, ಸಮಾಜಕ್ಕೆ ಆಗಬಹುದು, ಇದು ಶೋಭೆ ತರುವುದಿಲ್ಲವೆಂಬುದು ನಮಗೆಲ್ಲರಿಗೂ ಗೊತ್ತಿದೆ ದುರ್ದೈವವೆಂದರೆ, ಅಲ್ಲಿ VTU Vice Chancellor ಬಗ್ಗೆಯೂ ಗೊಂದಲ ಅವರು ನಿಯಮಾವಳಿ ಮೀರಿ ಮುಂದುವರೆಯುತ್ತಿರುವಂತಹ ವಾತಾವರಣ ವಿಜಾಪುರದಲ್ಲಿರುವ ಮಹಿಳಾ ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಬಗ್ಗೆಯೂ ಗೊಂದಲ ಅದೇನೇ ಇದ್ದರೂ,

ಅದರ ಬಗ್ಗೆ ನಾನು ವಿವರವಾಗಿ ಪ್ರಸ್ತಾಪಿಸುವುದಕ್ಕೆ ಬಯಸುವುದಿಲ್ಲ ಆದರೆ, ಈ ಸಂದರ್ಭದಲ್ಲಿ

**ಅಧ್ಯಕ್ಷರು** – ಅಂತಹವರನ್ನೆಲ್ಲಾ ಏಕೆ Vice Chancellor ಗಳನ್ನಾಗಿ ಮಾಡುತ್ತೀರಿ? ನೀವು ವಿಚಾರದ ಬುಡಕ್ಕೆ ಹೋಗಿ ಇಲ್ಲವೆಂದರೆ, ಅದು ತಿರುಗಿ ತಿರುಗಿ ನಿಮ್ಮತ್ತಲೇ ಬರುತ್ತದೆ ಬೇರೆ ಯಾರಾದರೂ, ಯೋಗ್ಯತೆಯುಳ್ಳವರನ್ನು Vice Chancellor ಗಳನ್ನಾಗಿ ಮಾಡಿ

**ಶ್ರೀ ವಿಶ್ವೇಶ್ವರ ಹೆಗಡೆ** – ಡಾ॥ ಪಿ ಎಸ್ ಪ್ರಭಾಕರ್‌ರವರು

**ಶ್ರೀ ಜಿ ವಿ ಶ್ರೀರಾಮರೆಡ್ಡಿ** – ಅಲ್ಲಲ್ಲಿ, ಅವರನ್ನು ಈ ಸರ್ಕಾರವೇ ಮಾಡಿದ್ದು ಆ Vice Chancellor ಬಹಳ ದೊಡ್ಡ fraud ಅವರ ಮೇಲೆ ಹಲವಾರು enquiries ನಡೆಯುತ್ತಿವೆ

**ಶ್ರೀ ವಿಶ್ವೇಶ್ವರ ಹೆಗಡೆ** – ಅಧ್ಯಕ್ಷರೆ, ನಾನು ಈಗ specific ಆಗಿ ಮಾತನಾಡುತ್ತಿರುವುದು, ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳ ಅವ್ಯವಹಾರ, ಭ್ರಷ್ಟಾಚಾರ ಕುರಿತಂತೆ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದರು ವಿಶೇಷವಾಗಿ ಸ್ನಾತ್ತಕೋತ್ತರ ಪರೀಕ್ಷೆಯ ಸಂದರ್ಭದಲ್ಲಿ ಅಲ್ಲಿ ಅವ್ಯವಹಾರವಾಯಿತೆಂದು ತನಿಖೆಯಿಂದ ದೃಢಪಟ್ಟು, 16 ವಿದ್ಯಾರ್ಥಿಗಳನ್ನು ಹೊರಗಡೆ ಹಾಕಿರುವುದು ನಮಗೆಲ್ಲರಿಗೂ ಗೊತ್ತಿದೆ ಅದರಲ್ಲಿ ಇದೇ ಉಪ ಕುಲಪತಿಗಳು involve ಆಗಿದ್ದಾರೆಂದು ಬೇರೆ ಬೇರೆ ತನಿಖೆಯ ವರದಿಗಳಿವೆ ಅಲ್ಲಿನ Registrar ಅವರನ್ನು suspend ಮಾಡಿದ್ದಾರೆ ಈಗ ಅವರು ಘಟಿಕೋತ್ಸವ ಸಮಾರಂಭದಲ್ಲೂ ಭಾಗವಹಿಸಬಾರದೆಂದು ವಿದ್ಯಾರ್ಥಿ ಪರಿಷತ್ತಿನ ವಿದ್ಯಾರ್ಥಿಗಳು Vice Chancellor ಎದುರುಗಡೆ ಹೇಳುವುದಕ್ಕೆ ಹೋದರು ಮೊದಲು ಏನು ಮಾಡಿದರು ಎಂದರೆ, ಶನಿವಾರದ ದಿವಸ ರಾಜ್ಯಪಾಲರ ಹತ್ತಿರ ಹೋದರು ರಾಜ್ಯಪಾಲರ ಹತ್ತಿರ ಹೋದಾಗ, ಈ ಉಪ ಕುಲಪತಿಗಳು ಗೂಂಡಾಗಳನ್ನು ಕಳುಹಿಸಿ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿದರು ಅವತ್ತು ವಿದ್ಯಾರ್ಥಿಗಳ ಮೇಲೆ ಹಲ್ಲೆಯಾಗಿದ್ದರಿಂದ ಅವರು ಆಸ್ಪತ್ರೆ ಸೇರಿದರು ಅದಾದ ನಂತರ ಅದನ್ನು ಪ್ರತಿಭಟಿಸುವುದಕ್ಕೆ ನಿನ್ನೆ

ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಎದುರುಗಡೆ ವಿದ್ಯಾರ್ಥಿ ಪರಿಷತ್ತಿನವರೆಲ್ಲರೂ ಹೋರಾಟ ಮಾಡುವುದಕ್ಕೆ ಹೋದರೆ, ನಿನ್ನೆಯೂ ವಿದ್ಯಾರ್ಥಿಗಳ ಮೇಲೆ ಮತ್ತೆ ಹಲ್ಲೆಯಾಯಿತು ಇದೇ ಪ್ರಭಾಕರ್ ಬಗ್ಗೆ ನೀವೆಲ್ಲರೂ ಹೇಗೆ CBI ನಿಂದ ರಕ್ಷಣೆ ಪಡೆದುಕೊಳ್ಳುತ್ತೀರೆಂಬುದು ನನಗೆ ಗೊತ್ತಿದೆ

(ಗೊಂದಲ)

**ಒಬ್ಬ ಮಾನ್ಯ ಸದಸ್ಯರು** – ಯಾರ ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ?

(ಗೊಂದಲ)

**ಶ್ರೀ ಧರ್ಮಸಿಂಗ್** –`ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಲ್ಲ ಅವರು Zero Hour ನಲ್ಲಿ raise ಮಾಡಿದ್ದಾರೆ ಆದರೆ, ABVP ವ್ಯವಸ್ಥಿತವಾಗಿ ಎಲ್ಲಾ ಕಡೆಗೂ ಪ್ರತಿಭಟನೆ ಮಾಡುತ್ತಿದ್ದಾರೆ ಬಿಜಾಪುರದಲ್ಲಿ ಸೈದಾ ಅಖ್ತರ್ ಇದ್ದಾರೆ ಸೈದಾ ಅಖ್ತರ್ ಅಲ್ಪಸಂಖ್ಯಾತ ಮಹಿಳೆ ಅಲ್ಲಿ ಆಕೆಯ ಮೇಲೆ ವ್ಯವಸ್ಥಿತವಾದ ಆಪಾದನೆ ಜರುಗುತ್ತಿವೆ ಇಲ್ಲಿ ಪ್ರಭಾಕರ್‌ರವರು ಪರಿಶಿಷ್ಟ ಜಾತಿ ಪಂಗಡಕ್ಕೆ ಸೇರಿದವರು ನಮ್ಮ ಕಾಲದಲ್ಲಿ ಅವರನ್ನು Vice Chancellor ಮಾಡಿದ್ದು ಇವತ್ತು ಎಲ್ಲಾ ಕಡೆಗೂ ABVP ಪ್ರತಿಭಟನೆ ಮಾಡಿದಂತಾಗುತ್ತದೆ

**ಶ್ರೀ ವಿಶ್ವೇಶ್ವರ ಹೆಗಡೆ** – ತನಿಖೆಯಾಗಿ ಅವರು ಆರೋಪಿಗಳೆಂದು ಸಾಬೀತಾಗಿದೆ

(ಗೊಂದಲ)

**ಶ್ರೀ ವಿಶ್ವೇಶ್ವರ ಹೆಗಡೆ** – ಮಾಡಿರುವುದು ತಪ್ಪು, ಭ್ರಷ್ಟಾಚಾರವನ್ನು ಭ್ರಷ್ಟಾಚಾರವೆಂದು ಹೇಳಲಿ ಜಾತಿಯನ್ನು ಬೆಂಬಲಿಸುವುದಲ್ಲ ಯಾರು ತಪ್ಪು ಮಾಡಿದ್ದಾರೋ, ತಪ್ಪು ಎಂದು ಹೇಳಲಿ ಅದಕ್ಕೆಲ್ಲಾ ಜಾತಿಯನ್ನು ಏಕೆ ತರುತ್ತೀರಿ? ಈ ಸದನದ ಮೂಲಕ ನೀವು ತಪ್ಪನ್ನು ಜಾತಿಯ ಮೂಲಕ ಮುಚ್ಚಿಹಾಕುವುದಕ್ಕೆ ಹೋಗಬೇಡಿ ಈ ರೀತಿ ಆಗಿರುವುದು ಸರಿಯಲ್ಲ ಅಧ್ಯಕ್ಷರೆ, ಈಗ ವಿದ್ಯಾರ್ಥಿಗಳೇನು ಜೈಲಿನಲ್ಲಿದ್ದಾರೆ, ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು ಅವರುಗಳ ಮೇಲೆ

ಕೇಸುಗಳನ್ನು ಹಾಕಿ ಮುಂದೆ ಅವರು ಸದಾ ಪೊಲೀಸ್ ಸ್ಟೇಷನ್‌ಗೆ, ಕೋರ್ಟಿಗೆ ಅಲೆದಾಡದೇ ಇರುವಂತಹ ಸ್ಥಿತಿ ತರಬೇಕು ವಿದ್ಯಾರ್ಥಿಗಳು ಈ ರೀತಿ ಯಾವುದೋ ಒಂದು ವಿಷಯಕ್ಕೆ ಹೋರಾಟ ಮಾಡಿದಂಥ ಸಂದರ್ಭದಲ್ಲಿ ಆ ವಿಚಾರಗಳನ್ನು ರಚನಾತ್ಮಕವಾಗಿ Positive ಆಗಿ ತೆಗೆದುಕೊಳ್ಳಬೇಕೆನ್ನುವಂತಹ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತಿದ್ದೇನೆ

**ಶ್ರೀ ರಾಮಲಿಂಗಾರೆಡ್ಡಿ** – ಅವರ್ಯಾರೂ ವಿದ್ಯಾರ್ಥಿಗಳಲ್ಲ, ಅವರೆಲ್ಲರೂ ABVP ಕಾರ್ಯಕರ್ತರು

**ಶ್ರೀ ಎಂ ಪಿ ಪ್ರಕಾಶ್** – ಸನ್ಮಾನ್ಯ ಅಧ್ಯಕ್ಷರೆ, ನೇರವಾಗಿ ಪರೀಕ್ಷೆಯಲ್ಲಿ ಅಂಕಗಳನ್ನು ಕೊಡತಕ್ಕಂಥ ವಿಷಯದಲ್ಲಿ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸುವ ಸಂದರ್ಭದಲ್ಲಿ ಅನೇಕ ಅವ್ಯವಹಾರಗಳಾಗಿವೆ ಮತ್ತು ಭ್ರಷ್ಟಾಚಾರವಾಗಿವೆ ಎನ್ನತಕ್ಕಂಥ ವಿಷಯದ ಬಗ್ಗೆ ಈಗಾಗಲೇ ಕೆಲವು ತನಿಖಾ ವರದಿಗಳು ಕೂಡ ಬಂದಿವೆ ಮಾನ್ಯ ರಾಜ್ಯಪಾಲರು ಕುಲಪತಿಗಳಾಗಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿರತಕ್ಕಂಥಾದ್ದು ಇದೆ ಈಗ ನಮ್ಮ ಹತ್ತಿರ ಕಡತ ಬಂದಿದೆ ಅದರ ಬಗ್ಗೆ ಯಾವ ಕ್ರಮ ಕೈಗೊಳ್ಳಬೇಕೆನ್ನುವುದರ ಬಗ್ಗೆ ಸರ್ಕಾರ ಕೂಡಲೇ ನಿರ್ಣಯ ಮಾಡುತ್ತದೆ ಇನ್ನು ABVP ಕಾರ್ಯಕರ್ತರು ಚಳವಳಿ ಮಾಡಿರತಕ್ಕಂಥಾದ್ದು, ಧರಣಿ ಮಾಡತಕ್ಕಂಥ ವಿಷಯದಲ್ಲಿ ಅವರೇನಾದರೂ ಅವಸರಪಟ್ಟಿದ್ದರೆ, ಅವರನ್ನು ಈಗ ಬಿಡತಕ್ಕಂಥ ಅಧಿಕಾರ ಸರ್ಕಾರಕ್ಕೆ ಇರುವುದಿಲ್ಲ ನಿಯಮಾವಳಿ ಪ್ರಕಾರ ಅವರು ಜಾಮೀನಿನ ಮೇಲೆ ಹೊರಗೆ ಬರಬೇಕಾಗುತ್ತದೆ ನಂತರ, ಯಾರ ಮೇಲಾದರೂ ಸತ್ಯಾಸತ್ಯತೆಯ ವಿಚಾರಗಳು ಬಂದಾಗ ಪ್ರಥಮ ವರ್ತಮಾನ ಪತ್ರಿಕೆ ಬೇರೆ, ಅವರ ಮೇಲೆ ಆರೋಪ ಪಟ್ಟಿ ಹಾಕತಕ್ಕಂಥಾದ್ದು ಬೇರೆ, ಆ ಸಂದರ್ಭದಲ್ಲಿ ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗುತ್ತದೆ ಒಟ್ಟಿನಲ್ಲಿ ಕುಲಪತಿಗಳಿಂದ ಅನೇಕ ಉನ್ನತಾಧಿಕಾರಿಗಳವರೆಗೂ ಕೂಡ ಪರೀಕ್ಷೆಯಲ್ಲಿ ಮಾಡಿರತಕ್ಕಂಥ ಅವ್ಯವಹಾರಗಳ ಬಗ್ಗೆ ನಡೆದ ನಿಷ್ಪಕ್ಷಪಾತವಾದ ಕೆಲವು ತನಿಖೆಯಲ್ಲಿ ನನಗೆ ವರದಿ ಬಂದಿದೆ ಆದರೆ, ನಾನಿನ್ನೂ ಕಡತವನ್ನು ಪರಿಶೀಲಿಸುವ ಹಂತದಲ್ಲಿದ್ದೇನೆ

**ಶ್ರೀ ಮಲ್ಲಿಕಾರ್ಜುನ ಖರ್ಗೆ** – ಯಾರೇ ಭ್ರಷ್ಟ Vice Chancellor ಇರಲಿ, ಅಧಿಕಾರಿ ಇರಲಿ, ನೀವು ನಿರ್ದಾಕ್ಷಿಣ್ಯವಾಗಿ action ತೆಗೆದುಕೊಳ್ಳಿ ಇಲ್ಲಿ ಜಾತಿ ಪ್ರಶ್ನೆ ಇಲ್ಲ

**(ಗೊಂದಲ)**

**ಶ್ರೀ ಸಿ ಟಿ ರವಿ** – ಇವತ್ತು ಮಾತನಾಡಿರೆಂದು ಉಪಾಧ್ಯಕ್ಷರೇ ನಿನ್ನೆ ಹೇಳಿದ್ದರು,

**ಶ್ರೀ ಎ ಎಸ್ ಬಸವರಾಜು** – ಅಧ್ಯಕ್ಷರೆ, ಅರಸೀಕರೆ ಕಗ್ಗೊಲೆಯಾಗಿದೆ

**(ಗೊಂದಲ)**

**ಶ್ರೀ ಮಲ್ಲಿಕಾರ್ಜುನ್ ಖರ್ಗೆ** – ಇಲ್ಲಿ ಯಾರು ತಪ್ಪು ಮಾಡಿದ್ದಾರೆ, ಅವರಿಗೆ ಶಿಕ್ಷೆ ಕೊಡಿ ಅವರು ಭ್ರಷ್ಟರಾಗಿದ್ದರೆ, dismiss ಮಾಡಿ, ಮನೆಗೆ ಕಳಿಸಿ, ಜೈಲಿಗೆ ಹಾಕಿ ಅದಕ್ಕೆ ಯಾರೂ ಅಡ್ಡ ಬರುವುದಿಲ್ಲ ಆದರೆ, ABVP ಯವರು ವಿಶಿಷ್ಟವಾಗಿ ವಿಜಾಪುರ ಮತ್ತು ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯಕ್ಕೆ, ಇಂಥಾದ್ದಕ್ಕೆ target ಮಾಡಿ ಏನು ಮಾಡುತ್ತಿದ್ದಾರೆ, ಇದರ ಕಾರಣವನ್ನು ಕೂಡ ತಾವು ಹುಡುಕಬೇಕು ಅಂದರೆ, at least ಮುಂದೆ ನ್ಯಾಯವಾಗಿ ಅನೇಕ ವಿದ್ಯಾರ್ಥಿಗಳು agitate ಮಾಡುತ್ತಾರೆ ಅವರ ಮೇಲೆ ಆಪಾದನೆ ಬರಬಾರದು ಇವರು ಯಾವ ದೃಷ್ಟಿಯಿಂದ ಮಾಡುತ್ತಿದ್ದಾರೋ, ಅದನ್ನೂ ಬಹಿರಂಗಪಡಿಸಿ, ಅಥವಾ ಅವರು ಮಾಡಿದಂತಹ ಅನ್ಯಾಯವನ್ನು ಕೂಡ ಹೊರಗೆ ಹಾಕಿ ಜೈಲಿಗೆ ಕಳುಹಿಸಿ

**ಶ್ರೀ ಎಂ ಪಿ ಪ್ರಕಾಶ್** – ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಈ ವಿದ್ಯಾರ್ಥಿ ಷರತ್ತುಗಳನ್ನು ಮಾಡಿ ಇಂಥ ಆಪಾದನೆಗಳನ್ನು ನಾವು ಅವರ ಮೇಲೆ ಮಾಡುವುದು, NSUI ಅವರು ನಮ್ಮ ಮೇಲೆ ಮಾಡತಕ್ಕದ್ದು, SFI ಮೇಲೆ ಇನ್ಯಾರೋ ಆಪಾದನೆ ಮಾಡುವುದು, ನಮ್ಮಲ್ಲಿ ವಿದ್ಯಾರ್ಥಿ ಪರಿಷತ್ತು ಎಂದು ಇಟ್ಟುಕೊಂಡಿದ್ದೇವೆ, ಅದರ ಮೇಲೆ ಮಾಡುವುದು, ಈ ರೀತಿಯಾಗುತ್ತಿದೆ ರಾಜಕೀಯ ಪಕ್ಷಗಳ frontal organization ಆಗಿ ಪರಿವರ್ತನೆಗೊಂಡಾಗ ಇಂತಹ

ಆಪಾದನೆಗಳಾಗುತ್ತದೆ ಯಾರಾದರೂ ಕೂಡ ವಿದ್ಯಾರ್ಥಿಗಳಾದಂತಹವರು ಎಲ್ಲಿ ಇಂಥ ಅವ್ಯವಹಾರಗಳಾಗಿರುತ್ತವೆ ಅಲ್ಲಿ ಅವರ ಜಾತಿ, ತತ್ವ, ನಂಬಿಕೆಗಳನ್ನು ಮುಂದಿಟ್ಟುಕೊಳ್ಳದೇ ಆ ಅವ್ಯವಹಾರಗಳ ವಿರುದ್ಧ ನಿಷ್ಪಕ್ಷಪಾತವಾಗಿ ಎಲ್ಲರ ವಿರುದ್ಧವೂ ಕ್ರಮ ಜರುಗಿಸಬೇಕೆಂಬ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರ ಮಾತನ್ನು ಒಪ್ಪುತ್ತೇನೆ ಆದರೆ, ಇದು ಕೇವಲ ಏ ಬಿ ವಿ ಪಿ ಗೆ ಮಾತ್ರ ಸೀಮಿತವಾಗಿಲ್ಲ ಅದು ಎಲ್ಲಾ ಪಕ್ಷಗಳ frontal organization ಗೂ ಸೀಮಿತವಾಗುತ್ತದೆ

(ಗೊಂದಲ)

**ಅಧ್ಯಕ್ಷರು** – ದಯಮಾಡಿ ಎಲ್ಲರೂ ಸಹಕರಿಸಬೇಕು

**ಶ್ರೀ ಸಿ ಟಿ ರವಿ** – ಮಾನ್ಯ ಅಧ್ಯಕ್ಷರೆ, ನಿನ್ನೆ ನಾನು ಕೇಳಿದಾಗ ನಾಳೆ ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ

**ಅಧ್ಯಕ್ಷರು** – ಈಗ ಬಜೆಟ್ ಮೇಲೆ ಚರ್ಚೆ ಆರಂಭವಾಗಲಿ ನಾಳೆ ನಿಮಗೆ ಅವಕಾಶ ಮಾಡಿಕೊಡುತ್ತೇನೆ ದಯಮಾಡಿ ನೀವು ಕುಳಿತುಕೊಳ್ಳಿ

**(ಈ) ಅರಸೀಕೆರೆ ತಾಲ್ಲೂಕಿನಲ್ಲಿ ಮಾಲೇಕಲ್ ತಿರುಪತಿಯಲ್ಲಿ ಆದ ಕೊಲೆಯ ಬಗ್ಗೆ**

**ಶ್ರೀ ಎ ಎಸ್ ಬಸವರಾಜ್ (ಅರಸೀಕೆರೆ)** – ಮಾನ್ಯ ಅಧ್ಯಕ್ಷರೆ, ಅರಸೀಕೆರೆ ತಾಲ್ಲೂಕಿನಲ್ಲಿ ಸುಮಾರು 2 ಕಿಲೋಮೀಟರ್ ಹತ್ತಿರದಲ್ಲಿ ಮಾಲೇಕಲ್ ತಿರುಪತಿ ಇದೆ ಅಲ್ಲಿ ಶನಿವಾರದ ದಿವಸ ಬೆಳಗಿನಜಾವ ಕಗ್ಗೊಲೆಯಾಗಿದೆ ಹುಂಡಿಯನ್ನು ಒಡೆಯಲು ಬಂದಿರತಕ್ಕ ವ್ಯಕ್ತಿಗಳು ಬೈರಪ್ಪ ಮತ್ತು ಗಂಗಣ್ಣ ಎಂಬುವರಿಬ್ಬರನ್ನೂ ಕೊಲೆ ಮಾಡಿ ಹುಂಡಿಯನ್ನು ಒಡೆಯಲು ಆಗದೆಯೇ ಹೊರಟುಹೋಗಿದ್ದಾರೆ ಆವತ್ತಿನ ರಾತ್ರಿ ಕ್ರಿಕೆಟ್ ಮ್ಯಾಚ್ ಇತ್ತು ರಾತ್ರಿ 3 ಗಂಟೆಯವರೆಗೆ ಎಲ್ಲರೂ ಬಾಗಿಲು ಹಾಕಿಕೊಂಡು ಕ್ರಿಕೆಟ್ ನೋಡುತ್ತಿರುವ ಸಂದರ್ಭದಲ್ಲಿ ಅವರು ದೇವಸ್ಥಾನಕ್ಕೆ ನುಗ್ಗಿ ಆ ಕಗ್ಗೊಲೆಯನ್ನು ಮಾಡಿ ಅಲ್ಲಿದ್ದ ಹುಂಡಿಯನ್ನು ಒಡೆಯಲು ಆಗದೆಯೇ ವಾಪಸ್ ಹೋಗಿದ್ದಾರೆ ಆದ್ದರಿಂದ ಅಲ್ಲಿಗೆ ಇವತ್ತು ಒಂದು ಪೊಲೀಸ್ ಔಟ್‌ಪೋಸ್ಟ್‌ನ್ನು ಮಾಡಿಕೊಡಬೇಕು ಇವತ್ತಿನ ದಿವಸ ಕಾವಲುಗಾರರು ಯಾರೂ ಬರುವುದಿಲ್ಲ ಅಲ್ಲಿಗೆ ಪೊಲೀಸ್‌ನವರನ್ನು ಹಾಕಿಕೊಡಬೇಕು ಮತ್ತು ಮೃತರ